**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ: 31-08-2015ರ ನಡವಳಿಗಳು**

## ವಿಷಯದ ಸಂಖ್ಯೆ : 175 / 2015-16

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಕಾರ್ಯನಿರ್ವಹಿಸುತ್ತಿರುವ ಪಾಲಿಕೆಯ ಪೌರಕಾರ್ಮಿಕರಿಗೆ ಸಾಧನಾ ಸಲಕರಣಾ ಮತ್ತು ಸುರಕ್ಷ ಧಿರಸ್ಸುಗಳನ್ನು ಖರೀದಿಸಲು ವರ್ಷಕ್ಕೆ ಎರೆಡು ಕಂತಿನಂತೆ ಮೊತ್ತವನ್ನು ಸಂಬಳದೊಂದಿಗೆ ಪಾವತಿಸುವ ಕುರಿತು

**ಪ್ರಸ್ತಾವನೆ:**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕ:23/07/2015 ರಂದು ಮಾನ್ಯ ಆಡಳಿತಗಾರರ ಅಧ್ಯಕ್ಷತೆಯಲ್ಲಿ ಪಾಲಿಕೆಯ ಪೌರಕಾರ್ಮಿಕರ ಸಂಘದ ಪದಾಧಿಕಾರಿಗಳೊಂದಿಗೆ ಜರುಗಿದ ಸಭೆಯಲ್ಲಿ ಚರ್ಚಿಸಿರುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪೌರಕಾರ್ಮಿಕರಿಗೆ ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ವಾರ್ಷಿಕವಾಗಿ ಬೇಕಾಗುವ ಸಾಧನಾ ಸಲಕರಣೆ ಮತ್ತು ಸುರಕ್ಷತಾ ಧಿರಸುಗಳ ಖರೀದಿಸುವ ಸಂಬಂಧಿಸಿದಂತೆ ಈ ಹಿಂದೆ ವಿಭಾಗವಾರು ಸದರಿ ಸಲಕರಣೆಗಳನ್ನು ಒದಗಿಸಲು ವಿಭಾಗ ಮಟ್ಟದ ಕಾರ್ಯಪಾಲಕ ಅಭಿಯಂತರರಿಗೆ ತಿಳಿಸಲಾಗಿಯು ಸಹ ಕೆಲ ಪೌರಕಾರ್ಮಿಕರಿಗೆ ಸದರಿ ಸಲಕರಣೆಗಳನ್ನು ನೀಡದೆ ಇರುವ ಕುರಿತು ಪೌರಕಾರ್ಮಿಕ ಸಂಘದ ಪದಾಧಿಕಾರಿಗಳು ಆಕ್ಷೇಪಣೆ ವ್ಯಕ್ತಪಡಿಸುತ್ತಾ, ಪೌರಕಾರ್ಮಿಕರಿಗೆ ಸಮರ್ಪಕ ಸಲಕರಣೆಗಳಿಲ್ಲದೆ ಕೆಲಸ ನಿರ್ವಹಿಸುವುದು ಕಷ್ಟಸಾಧ್ಯವಾಗಿರುತ್ತದೆ ಎಂದು ತಿಳಿಸುತ್ತಾ, ಪೌರಕಾರ್ಮಿಕರಿಗೆ ನೇರವಾಗಿ ವೇತನದೊಂದಿಗೆ ಸದರಿ ಸಲಕರಣೆಗಳಿಗೆ ತಗಲುವ ವೆಚ್ಚವನ್ನು ಪಾವತಿಸಿದ್ದಲ್ಲಿ ಅವರುಗಳೇ ಸಲಕರಣೆಗಳನ್ನು ಖರೀದಿಸಿ ಸಮರ್ಪಕವಾಗಿ ಕೆಲಸ ನಿರ್ವಹಿಸುವಲ್ಲಿ ಸಹಕಾರಿಯಾಗಲಿದೆ ಎಂದು ತಿಳಿಸುತ್ತಾ ಈ ಬಗ್ಗೆ ಕ್ರಮವಹಿಸುವಂತೆ ಕೋರಿದರು. ಸದರಿಯವರ ಕೋರಿಕೆಯ ಮೇರೆಗೆ ಮಾನ್ಯ ಆಡಳಿತಗಾರರು ನಿರ್ದೇಶಿಸಿರುವಂತೆ ಅವಶ್ಯಕ ಸಾಧನಾ ಸಲಕರಣೆ ಮತ್ತು ಸುರಕ್ಷತಾ ಧಿರಸುಗಳ ಖರೀದಿಗೆ ತಗಲುವ ವೆಚ್ಚವನ್ನು ವರ್ಷಕ್ಕೆ 02 ಬಾರಿ(ಎರಡು ವಂತಿಕೆಯಲ್ಲಿ) ಪಾವತಿಸಬೇಕಾಗಿರುತ್ತದೆ.

ಈ ಕುರಿತಂತೆ ಈ ಹಿಂದೆ ದಿನಾಂಕ:10/06/2014ರಂದು ವಿಶೇಷ ಆಯುಕ್ತರು (ಯೋಜನೆ)ರವರ ಅಧ್ಯಕ್ಷತೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪೌರಕಾರ್ಮಿಕರಿಗೆ ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ವಾರ್ಷಿಕವಾಗಿ ಬೇಕಾಗುವ ಸಾಧನಾ ಸಲಕರಣೆ ಮತ್ತು ಸುರಕ್ಷತಾ ಧಿರಸುಗಳ ಖರೀದಿಸುವ ಸಂಬಂಧ ಏಕ ರೂಪದಲ್ಲಿ ಮಾನದಂಡಗಳು ನಿಗಧಿಪಡಿಸುವ ಸಲುವಾಗಿ ನಡೆದ ಸಭೆಯ ನಡವಳಿಗಳನ್ವಯ ಈ ಕೆಳಕಂಡ ಸಾಧನಾ ಸಲಕರಣಾ ಮತ್ತು ಸುರಕ್ಷ ಧಿರಸ್ಸುಗಳನ್ನು ಪೌರಕಾರ್ಮಿಕರಿಗೆ ನೀಡಲು ತೀರ್ಮಾನಿಸಲಾಗಿರುತ್ತದೆ.

**ಮನೆಮನೆಯಿಂದ ತ್ಯಾಜ್ಯ ಸಂಗ್ರಹಣೆ ಮತ್ತು ಬೀದಿ ಗುಡಿಸುವ ಪೌರಕಾರ್ಮಿಕರಿಗೆ ನೀಡಬೇಕಾಗಿರುವ ಸಾಧನಾ ಸಲಕರಣಾ ಮತ್ತು ಸುರಕ್ಷ ಧಿರಸ್ಸುಗಳು.**

| ಕ್ರ.ಸಂ | ಸಾಧನಾ ಸಲಕರಣಾ ಮತ್ತು ಸುರಕ್ಷ ಧಿರಸ್ಸುಗಳು | ವಾರ್ಷಿಕ ಕನಿಷ್ಠ ಪ್ರಮಾಣ ಪ್ರತಿ ಪೌರಕಾರ್ಮಿಕರಿಗೆ |
|---|---|---|
| 1. | ತಳ್ಳುವ ಗಾಡಿ | 5 ವರ್ಷಕ್ಕೆ ಒಮ್ಮೆ ಒಂದು (ಪ್ರತ್ಯೇಕವಾಗಿ ಪ್ರತಿ ಮನೆಮನೆಯಿಂದ ತ್ಯಾಜ್ಯ ಸಂಗ್ರಹಣೆ ಮಾಡುವವರಿಗೆ ಮತ್ತು ಕಸ ಗುಡಿಸುವವರಿಗೆ) |
| 2. | ಉದ್ದನೆ/ ಗಿಡ್ಡನೆ ಹಿಡಿ ಪೊರಕೆ | 6 ಸಂಖ್ಯೆಗಳು-15 ಕೆ.ಜಿ (2 ತಿಂಗಳಿಗೊಮ್ಮೆ ಒಂದರಂತೆ /2.5 ಕೆ.ಜಿ ನೀಡುವುದು) |

..................2

| | | |
|---|---|---|
| 3. | ಘಮೇಲಾ | 1 ಸಂಖ್ಯೆ |
| 4. | ಮೆಟಲ್ ಪ್ಲೇಟ್ | 4 ಸಂಖ್ಯೆ (3 ತಿಂಗಳಿಗೊಮ್ಮೆ ಒಂದರಂತೆ ನೀಡುವುದು) |
| 5. | ಮೆಟಲ್ ಟ್ರೇ | 4 ಸಂಖ್ಯೆ (3 ತಿಂಗಳಿಗೊಮ್ಮೆ ಒಂದರಂತೆ ನೀಡುವುದು) |
| 6. | ಕೋಂಗಾಣಿ | 1 ಸಂಖ್ಯೆ |
| 7. | ಕೈ ಕವಚಗಳು | 12 ಜೊತೆ |
| 8. | ಮುಖ ಕವಚಗಳು | 12 ಜೊತೆ |
| 9. | ಚನಕೆ (Drain Scrapers) | 2 (6 ತಿಂಗಳಿಗೊಮ್ಮೆ ಒಂದರಂತೆ ನೀಡುವುದು) |
| 10 | ಮಮ್ಟೀ | 4 (3 ತಿಂಗಳಿಗೊಮ್ಮೆ ಒಂದರಂತೆ ನೀಡುವುದು) |
| 11. | ಮಚ್ಚು | 4 (3 ತಿಂಗಳಿಗೊಮ್ಮೆ ಒಂದರಂತೆ ನೀಡುವುದು) |
| 12. | ಕೈ ಮುಳ್ಳು | 4 (3 ತಿಂಗಳಿಗೊಮ್ಮೆ ಒಂದರಂತೆ ನೀಡುವುದು) |

- ಸದರಿ ಸಾಧನಾ ಸಲಕರಣಾ ಮತ್ತು ಸುರಕ್ಷ ಧಿರಸ್ಸುಗಳನ್ನು ಪೌರಕಾರ್ಮಿಕರ ಸಂಖ್ಯೆಗನುಗುಣವಾಗಿ ವರ್ಷಕೊಮ್ಮೆ ವಲಯವಾರು ಟೆಂಡರ್ ಕರೆದು ಖರೀದಿಸುವಂತೆ ತೀರ್ಮಾನಿಸಲಾಗಿರುತ್ತದೆ.
- ಸದರಿ ಸಾಮಾಗ್ರಿಗಳನ್ನು ವಲಯದಲ್ಲಿ ಸ್ಟೋರ್ಸ್‌ಗಳಲ್ಲಿ ಸ್ಟಾಕ್ ಬುಕ್‌ಗಳಲ್ಲಿ ನಿರ್ವಹಿಸುವುದು
- ತಳ್ಳುವ ಗಾಡಿ ಆಗಾಗ ರಿಪೇರಿ ಬರುವ ಸಾಧ್ಯತೆಯಿರುವುದರಿಂದ ಪ್ರತಿ ವರ್ಷ ಪ್ರತಿ ತಳ್ಳುವ ಗಾಡಿಗೆ 600 ರೂಗಳನ್ನು ನಿರ್ವಹಣೆಗಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರ ಅಧೀನದಲ್ಲಿ ಅವಶ್ಯಕತೆಗನುಗುಣವಾಗಿ ವೆಚ್ಚ ಮಾಡಲು ತೀರ್ಮಾನಿಸಲಾಗಿರುತ್ತದೆ.
- ಪೌರಕಾರ್ಮಿಕರಿಗೆ ಅದರಲ್ಲೂ ಮಹಿಳಾ ಪೌರಕಾರ್ಮಿಕರಿಗೆ ವಸ್ತ್ರ ಬದಲಾಯಿಸುವ ಕೊಠಡಿಯನ್ನು ಮತ್ತು ಶೌಚಾಲಯವನ್ನು ಒದಗಿಸುವಂತೆ ಪ್ರಧಾನ ಕಾರ್ಯದರ್ಶಿಗಳು–ಪೌರಕಾರ್ಮಿಕರ ಸಂಘ ದವರು ಒತ್ತಾಯಿಸಿದರು. ಈ ಬಗ್ಗೆ ಚರ್ಚಿಸಿ ಪಾಲಿಕೆಯ ಹೆಲ್ತ್ ವಾರ್ಡ್‌ಗಳಲ್ಲಿ ಅಥವಾ ವಾರ್ಡ್ ಕಛೇರಿಗಳಲ್ಲಿ ಈಗಾಗಲೇ ಲಭ್ಯವಿರುವ ಸೌಲಭ್ಯಗಳನ್ನು ಒದಗಿಸುವಂತೆ ತೀರ್ಮಾನಿಸಲಾಗಿರುತ್ತದೆ.
- ಸಮವಸ್ತ್ರ ಮತ್ತು ಸುರಕ್ಷ ಧಿರಸ್ಸುಗಳನ್ನು ತಪ್ಪದೆ ಪೌರಕಾರ್ಮಿಕರಿಗೆ ಆರೋಗ್ಯ ಹಿತದೃಷ್ಟಿಯಿಂದ ಬಳಸಲು ಸೂಕ್ತ ತಿಳುವಳಿಕೆ ಮೂಡಿಸುವಂತೆ ಸಂಘದ ವತಿಯಿಂದ ಕ್ರಮ ಜರುಗಿಸಲು ಸೂಚಿಸುವಂತೆ ತೀರ್ಮಾನಿಸಲಾಗಿರುತ್ತದೆ.

'ಅ'

ಆದರೆ ಈಗಾಗಲೇ ಮಾನ್ಯ ಆಡಳಿತಗಾರರು ಪಾಲಿಕೆ ಪೌರಕಾರ್ಮಿಕರಿಗೆ ನೀಡಬೇಕಾಗಿರುವ ಸಾಧನಾ ಸಲಕರಣೆ (ತಳ್ಳುವ ಗಾಡಿಯನ್ನು ಹೊರತು ಪಡಿಸಿ) ಮತ್ತು ಸುರಕ್ಷತಾ ಧಿರಸುಗಳ ವೆಚ್ಚವನ್ನು ಪೌರಕಾರ್ಮಿಕ ವೇತನದೊಂದಿಗೆ ಪಾವತಿಸಲು ನಿರ್ದೇಶಿಸಿದ ಮೇರೆಗೆ, ಮೇಲ್ಕಂಡ ಸಲಕರಣೆ ಮತ್ತು ಸುರಕ್ಷತಾ ಧೀರಸುಗಳಲ್ಲಿ ತಳ್ಳುವ ಗಾಡಿಯನ್ನು ಹೊರತು ಪಡಿಸಿ (ತಳ್ಳುವ ಗಾಡಿಯ ಕುರಿತಂತೆ ಪೌರಕಾರ್ಮಿಕರ ಉಪಯುಕ್ತತೆಗೆನುಸಾರವಾಗಿ ವಿನ್ಯಾಸಗೊಳಿಸಿ ಖರೀದಿಸಬೇಕಾಗಿರುವುದರಿಂದ) ಉಳಿದ ಉಪಕರಣಗಳ ಖರೀದಿಗೆ ತಗಲುವ ಅಂದಾಜು ವೆಚ್ಚವನ್ನು ಖಾಯಂ ಪೌರಕಾರ್ಮಿಕರೊಂದಿಗೆ ಮಾರುಕಟ್ಟೆಯಲ್ಲಿ ಲಭ್ಯವಿರುವ ಉತ್ತಮ ಗುಣಮಟ್ಟದ ಸಾಧನಾ ಸಲಕರಣಾ ಮತ್ತು ಸುರಕ್ಷ ಧಿರಸ್ಸುಗಳನ್ನು ಪರಿಶೀಲಿಸಿದ ದರಗಳನ್ನು ಪರಿಗಣಿಸಿ ಅವುಗಳನ್ನು ಅಳವಡಿಸಿಕೊಳ್ಳಲಾಗಿ, ಈ ದರಗಳನ್ವಯ ತಗಲುವ ವಾರ್ಷಿಕ ವೆಚ್ಚವು ಓರ್ವ ಪೌರಕಾರ್ಮಿಕನಿಗೆ ರೂ. 6178.00 ಗಳಾಗಿದ್ದು, ಅವುಗಳ ವಿವರಗಳು ಈ ಕೆಳಕಂಡಂತಿರುತ್ತದೆ.

...................3

| ಕ್ರ ಸಂ | ಸಾಧನಾ ಸಲಕರಣಾ ಮತ್ತು ಸುರಕ್ಷ ಧಿರಸ್ಸುಗಳು | ವಾರ್ಷಿಕ ಕನಿಷ್ಠ ಪ್ರಮಾಣ ಪ್ರತಿ ಪೌರಕಾರ್ಮಿಕರಿಗೆ | ಮಾರುಕಟ್ಟೆಯಂತೆ ದರ | ವಾರ್ಷಿಕವಾಗಿ ಸಾಮಾಗ್ರಿಗಳ ಖರೀದಿಗೆ ತಗಲುವ ಒಟ್ಟು ಅಂದಾಜು ಮೊತ್ತ |
|---|---|---|---|---|
| 1 | ಉದ್ದನೆ ಪೊರಕೆ | 6 ಸಂಖ್ಯೆ (2 ತಿಂಗಳಿಗೊಮ್ಮೆ ಒಂದರಂತೆ) | ರೂ. 160ಕ್ಕೆ ಒಂದು ರಂತೆ | 960 |
| 2 | ಘಮೇಲಾ | 1 ಸಂಖ್ಯೆ | ರೂ. 115.00 | 148.00 |
| 3 | ಮೆಟಲ್ ಪ್ಲೇಟ್ | 4 ಸಂಖ್ಯೆ (3 ತಿಂಗಳಿಗೊಮ್ಮೆ ಒಂದರಂತೆ ನೀಡುವುದು) | ರೂ. 80.00 | 320.00 |
| 4 | ಮೆಟಲ್ ಟ್ರೇ | 4 ಸಂಖ್ಯೆ (3 ತಿಂಗಳಿಗೊಮ್ಮೆ ಒಂದರಂತೆ ನೀಡುವುದು) | ರೂ. 91.00 | 364.00 |
| 5 | ಕೋಂಗಾಣಿ | 1 ಸಂಖ್ಯೆ | ರೂ. 50.00 | 50.00 |
| 6 | ಕೈ ಕವಚಗಳು (ರಬ್ಬರ್) | 12 ಜೊತೆ | ರೂ. 91.00 | 1092.00 |
| 7 | ಮುಖ ಕವಚಗಳು | 12 ಜೊತೆ | ರೂ. 6.00 | 84.00 |
| 8 | ಚನಕೆ (Drain Scrapers) | 2 (6 ತಿಂಗಳಿಗೊಮ್ಮೆ ಒಂದರಂತೆ ನೀಡುವುದು) | ರೂ. 190.00 | 380.00 |
| 9 | ಮಮ್‌ಟೀ/ ಪಿಕಾಸಿ | 2 (6 ತಿಂಗಳಿಗೊಮ್ಮೆ ಒಂದರಂತೆ ನೀಡುವುದು) | ರೂ. 250.00 | 500.00 |
| 10 | ಮಚ್ಚು | 4 (3 ತಿಂಗಳಿಗೊಮ್ಮೆ ಒಂದರಂತೆ ನೀಡುವುದು) | ರೂ. 120.00 | 480.00 |
| 11 | ಕೈ ಮುಳ್ಳು | 4 (3 ತಿಂಗಳಿಗೊಮ್ಮೆ ಒಂದರಂತೆ ನೀಡುವುದು) | ರೂ. 350.00 | 1400.00 |
| 12 | ರೀಫ್ಲೆಕ್ಟ್ ಜಾಕೆಟ್ | 4 (3 ತಿಂಗಳಿಗೊಮ್ಮೆ ಒಂದರಂತೆ ನೀಡುವುದು) | ರೂ. 75.00 | 300.00 |
| **ಒಟ್ಟು (ರೂ. ಆರು ಸಾವಿರದ ಒಂದು ನೂರ ಎಪ್ಪತ್ತೆಂಟು ಮಾತ್ರ)** | | | | **6178/–** |

ವಲಯವಾರು ಪೌರಕಾರ್ಮಿಕರ ಸಂಖ್ಯೆ ಜನವರಿ 2015ರಲ್ಲಿ ಮಾಹೆಯಲ್ಲಿ ಹೆಚ್.ಆರ್.ಎಂ.ಎಸ್ ಮೂಲಕ ಪಡೆದ ವರದಿಯಂತೆ ಈ ಕೆಳಕಂಡಂತ್ತಿದ್ದು, ವಲಯ ವಾರು ಬೇಡಿಕೆಯ ಮೊತ್ತ ಈ ಕೆಳಕಂಡಂತಿರುತ್ತದೆ.

| ಕ್ರ. ಸಂ | ವಲಯ | ಖಾಯಂ ಪೌರಕಾರ್ಮಿಕ ಸಂಖ್ಯೆ | ಸಮಾನ ವೇತನ ಸಮಾನ ಕೆಲಸದ ಪೌರಕಾರ್ಮಿಕರ ಸಂಖ್ಯೆ | ಒಟ್ಟು | ವಾರ್ಷಿಕ ವೆಚ್ಚ | ವರ್ಷಕ್ಕೆರೆಡು ಕಂತುಗಳಂತೆ ಪ್ರತಿ ಕಂತಿನ ಮೊತ್ತ |
|---|---|---|---|---|---|---|
| 1 | ಪೂರ್ವ | 789 | 112 | 901 | 5566378 | 2783189 |
| 2 | ಪಶ್ಚಿಮ | 1074 | 01 | 1075 | 6641350 | 3320675 |

...................4

| | | | | | | |
|---|---|---|---|---|---|---|
| 3 | ದಕ್ಷಿಣ | 724 | 00 | 724 | 4472872 | 2236436 |
| 4 | ಬೊಮ್ಮನಹಳ್ಳಿ | 29 | 38 | 67 | 413926 | 206963 |
| 5 | ದಾಸರಹಳ್ಳಿ | 13 | 12 | 25 | 154450 | 77225 |
| 6 | ಮಹಾದೇವಪುರ | 47 | 33 | 80 | 494240 | 247120 |
| 7 | ಆರ್.ಆರ್.ನಗರ | 69 | 24 | 93 | 574554 | 287277 |
| 8 | ಯಲಹಂಕ | 89 | 54 | 143 | 883454 | 441727 |
| ಒಟ್ಟು | | **2834** | **274** | **3108** | **19201224** | **9600612** |

*** ಉದ್ದನೆಯ ಪೊರಕೆಗಳ ದರಗಳನ್ನು ಪರಿಗಣಿಸಲಾಗಿದ್ದು, ಉದ್ದನೆ ಪೊರಕೆಗಳನ್ನು ಪಡೆದು ಬಳಕೆ/ಉಪಯೋಗಿಸುವಿಕೆಯ ಬಗ್ಗೆ ಅರಿವು ಮೂಡಿಸಿ ಕಡ್ಡಾಯಗೊಳಿಸಬೇಕಾಗಿರುತ್ತದೆ.*

ಈ ಮೇಲ್ಕಂಡ ಕೋಷ್ಟಕಗಳನ್ವಯ ಮಾರುಕಟ್ಟೆ ದರಗಳಂತೆ ಸಾಧನಾ ಸಲಕರಣೆ ಹಾಗು ಸುರಕ್ಷತಾ ಧಿರಸ್ಸುಗಳನ್ನು ಖರೀದಿಸಲು ವರ್ಷಕ್ಕೆ ಎರಡು ಕಂತಿನ ಮೊತ್ತವನ್ನು ವಿವಿಧ ವಲಯಗಳಿಗೆ ಘನತ್ಯಾಜ್ಯ ನಿರ್ವಹಣೆಯಲ್ಲಿ ತೊಡಗಿಸಿಕೊಂಡಿರುವ ಪಾಲಿಕೆಯ ಪೌರಕಾರ್ಮಿಕರಿಗೆ ಮಾತ್ರ ಈ ಹಿಂದೆ ಸಾಧನಾ ಸಲಕರಣೆ ಹಾಗು ಸುರಕ್ಷತಾ ಧಿರಸ್ಸುಗಳನ್ನು ಒದಗಿಸಿರುವ ಬಗ್ಗೆ ದೃಢಿಕರಿಸಿಕೊಂಡು, ಸಂಬಳದೊಂದಿಗೆ ಪಾವತಿಸುವಂತೆ ಸೂಚಿಸಬಹುದಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪಾಲಿಕೆ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಕಾರ್ಯನಿರ್ವಹಿಸುತ್ತಿರುವ ಪಾಲಿಕೆಯ ಪೌರಕಾರ್ಮಿಕರಿಗೆ ಸಾಧನಾ ಸಲಕರಣಾ ಮತ್ತು ಸುರಕ್ಷ ಧಿರಸ್ಸುಗಳನ್ನು ಖರೀದಿಸಲು ವರ್ಷಕ್ಕೆ ಎರಡು ಕಂತಿನಂತೆ ಮೊತ್ತವನ್ನು ಸಂಬಳದೊಂದಿಗೆ ಪಾವತಿಸುವ ಬಗ್ಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:13-08-2015ರ ಟಿಪ್ಪಣಿ.

**ತೀರ್ಮಾನ:** **"ದಿನಾಂಕ:10-06-2014ರ ವಿಶೇಷ ಆಯುಕ್ತರು (ಯೋಜನೆ) ರವರ ಅಧ್ಯಕ್ಷತೆಯಲ್ಲಿ ತೆಗೆದುಕೊಂಡ ತೀರ್ಮಾನದಂತೆ ಸದರಿ ಸಾಧನಾ ಸಲಕರಣೆ ಮತ್ತು ಸುರಕ್ಷ ಧಿರಸ್ಸುಗಳನ್ನು (ಪೊರಕೆ ಹೊರತು) ವರ್ಷಕೊಮ್ಮೆ ವಲಯವಾರು ಟೆಂಡರ್ ಕರೆದು ಖರೀದಿಸುವಂತೆ ಅನುಮೋದಿಸಿದೆ. ಪೊರಕೆಗಳ ವೆಚ್ಚವನ್ನು ಮಾತ್ರ ಎರಡು ಕಂತಿನಲ್ಲಿ ಸಂಬಳದೊಂದಿಗೆ ಪಾವತಿಸಲು ಅನುಮೋದಿಸಿದೆ. ಉಳಿದ ಎಲ್ಲವನ್ನು ಮೇಲಿನಂತೆ ಟೆಂಡರ್ ಕರೆದು ಖರೀದಿಸುವುದು".**

(ಟಿ.ಎಂ.ವಿಜಯಭಾಸ್ಕರ್)
ಆಡಳಿತಗಾರರು